**ದಿನಾಂಕ: 04-09-2023 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಎದುರುದಾರರ ಪರ ಶ್ರೀ.ಎಸ್ ಟಿ ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಅದರಲ್ಲಿನ ಸಂಗತಿಗಳೆಲ್ಲ ಸತ್ಯವಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

ನಮ್ಮ ಕೆ ಎಸ್ ಆರ್ ಟಿ ಸಿ ಯ ಹಿರಿಯ ವಿಭಾಗೀಯ ನಿಯಂತ್ರಣ ಅಧಿಕಾರಿಗಳು ಈ ಕೇಸ್ ನಡೆಸಲು ನನಗೆ ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ಅದು ನಿ ಆರ್ 1 ಎಂದು ಗುರುತಿಸಲಾಯಿತು. ಈ ಅಪಘಾತಕ್ಕೆ ಸಂಬಂಪಟ್ಟ ನಾಲ್ಕು ಪೊಟೋಗಳು ಮತ್ತು ಒಂದು ಸಿ ಡಿ ಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ ಆರ್ 2 ರಿಂದ ನಿ ಆರ್ 5 ಎಂದು, ಸಿ ಡಿ ಯನ್ನು ನಿ ಆರ್ 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ.ಆರ್ ಎಸ್ ಜಿ ಪರವಾಗಿ ಶ್ರೀ.ಆರ್ ಯು ಪಿ ವಕೀಲರಿಂದ**

ಆ ದಿನ ನಾನು ಕೆ ಎಸ್ ಆರ್ ಟಿ ಸಿ ಬಸ್ ನಂಬರ ಕೆಎ-19 ಎಫ್ 3471 ರ ಚಾಲಕನಾಗಿದ್ದೆನು. ಈ ಅಪಘಾತಕ್ಕೆ ಸಂಬಂದಪಟ್ಟಂತೆ ನಮ್ಮ ಬಸ್ ನ ನಿರ್ವಾಹಕರು ಪೊಲೀಸರಿಗೆ ದೂರು ನೀಡಿರುತ್ತಾರೆ. ಈ ಅಪಘಾತಕ್ಕೆ ಸಂಬಂದಪಟ್ಟಂತೆ ನನ್ನ ವಿರುದ್ಧ ವಾದ ಕುಂದಾಪುರ ನ್ಯಾಯಾಲಯದಲ್ಲಿದೆ. ಪೊಲೀಸರು ನಮ್ಮ ನಿರ್ವಾಹಕರ ಪುನರ ಹೇಳಿಕೆ ಪಡೆದು ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಕ್ಕೆ ಸಂಬಂದಪಟ್ಟಂತೆ ದೋಷಾರೋಪಣ ಪಟ್ಟಿಯನ್ನು ತನಿಖೆ ಮಾಡಿ ಸಲ್ಲಿಸಿದ್ದಾರೆ ಎಂದರೆ ಸರಿ. ಪೊಲೀಸರು ಹಾಜರುಪಡಿಸಲಾದ ದೋಷಾರೋಪಣ ಪಟ್ಟಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಈ ಅಪಘಾತವು ನನ್ನ ತಪ್ಪಿನಿಂದಲೇ ಆಗಿರುವುದರಿಂದ ಆ ದೋಷಾರೋಪಣ ಪತ್ರವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ಅಶೋಕ ಲೇಲ್ಯಂಡ ಮಿನಿ ಗೂಡ್ಸ ವಾಹನದ ಸಂಖ್ಯೆ ಕೆ ಎ 31/ಎ 3543 ರ ಚಾಲಕನ ತಪ್ಪಿನಿಂದಲೇ ಆಗಿದೆ ಎಂದು ಸುಳ್ಳು ಅಂಶಗಳನ್ನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಚಲಾಯಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ ಮದ್ದೆಬಿಹಾಳದಿಂದ

ಮಂಗಳೂರಿಗೆ ಹೋಗುತ್ತಿದ್ದೆನು. ಆ ಗುಡ್ಸ ಗಾಡಿಯು ಕಾಸರಗುಡಿಗೆ ಹೋಗುತ್ತಿದ್ದರು ಎಂದು ಆ ನಂತರ ಗೊತ್ತಾಯಿತು . ಆ ದಿನ ನಾನು ಸಂಚಾರಿ ನಿಯವಗುಗಳನ್ನು ಪಾಲಿಸದೇ ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಏಕಾಏಕಿ ಬಲಬದಿಗೆ ತಿರುಗಿಸಿದ ಕಾರಣ ನನ್ನ ತಪ್ಪಿನಿಂದಲೇ ಈ ಅಫಾತವಾದಗಿದೆ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ತಪ್ಪಿನಿಂದಲೇ ಆಗಿದ್ದರೂ ಸಹ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನನ್ನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ

ಹಾನಗಲ್